(ಇಂದು ದಿನಾಂಕ: 23-06-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನಾನು ಒಕ್ಕಲುತನ ಮಾಡುತ್ತೇನೆ. ನನಗೆ ಚಂದ್ರಬಂಡ ಗ್ರಾಮದಲ್ಲಿ 12 ಎಕರೆ ನೀರಾವರಿ ಜಮೀನು ಇದೆ. ವರ್ಷಕ್ಕೆ 2 ಬೆಳೆ ಬೆಳೆಯುತ್ತದೆ. ನನಗೆ ಒಕ್ಕಲುತನ ಬಿಟ್ಟರೆ ಬೇರೆ ಯಾವುದೇ ಆದಾಯ ಇಲ್ಲ. ನಾನು ಹಣವನ್ನು ಮನೆಯಲ್ಲಿ ಇಡುತ್ತೇನೆ, ಬ್ಯಾಂಕಿನಲ್ಲಿ ಇಡಲ್ಲ. ಕೊಟೇಶ್ವರರಾವ್ ಹೈದ್ರಾಬಾದ್ ನಿವಾಸಿ. ಕೊಟೇಶ್ವರರಾವ್ ತೆಲಗು ಭಾಷೆ ಮಾತ್ರ ಮಾತನಾಡುತ್ತಾರೆ ಎಂದರೆ ಸರಿಯಲ್ಲ. ಕನ್ನಡ ಕೂಡಾ ಮಾತನಾಡುತ್ತಾರೆ. ಕೊಟೇಶ್ವರರಾವ್ ರವರು ಬಹಳ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿ. ಕೊಟೇಶ್ವರರಾವ್ ರವರ ಮಗ ಕಿರಣಕುಮಾರ, ಹೆಂಡತಿ ಹೆಸರು ಗೊತ್ತಿಲ್ಲ. ಕಿರಣಕುಮಾರ ಹೆಂಡತಿಯ ತಂದೆ ಅಂದರೆ ಮಾವ ಕೆ ಸುಧೀರ ಎಂದರೆ ಸರಿ. ಸದರಿ ಸುಧೀರ ನನಗೆ ಪರಿಚಯ ಇಲ್ಲ ಮತ್ತು ನಾನು ಅವರನ್ನು ನೋಡಿಲ್ಲ. ಸುಧೀರರವರು ಸಾಕ್ಷಿ ಅಂತಾ ಬಂದಾಗ ನಾನು ನೋಡಿದ್ದೇನೆ. ಕೊಟೇಶ್ವರರಾವ್/ಪ್ರತಿವಾದಿ ನನಗೆ 30 ವರ್ಷಗಳಿಂದ ಪರಿಚಯ. ನಿಪಿ-1 ರಿಂದ 3 ಸದರಿ ಮೂರು ದಾಖಲೆಗಳಿಗೆ ಕೆ ಸುಧೀರರವರೇ ಸಾಕ್ಷಿದಾರರಾಗಿದ್ದಾರೆ ಎಂದರೆ ಸರಿ. ನಿಪಿ-1 ರಿಂದ 3 ದಾಖಲೆಗಳನ್ನು ನಬೀಸಾಬರವರು ಬರೆದಿರುತ್ತಾರೆ. ಕೆ ಸುಧೀರ ಇವರು ಮರಣ ಹೊಂದಿದ್ದಾರೆ. ಸದರಿ ಸುಧೀರರವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸುಧೀರವರ ಮರಣದ ಮರುದಿನ ಕೊಟೇಶ್ವರರಾವ್/ಪ್ರತಿವಾದಿರವರು ನನಗೆ ಹೇಳಿದರು. ಸುಧೀರರವರ ಮರಣದ ಬಗ್ಗೆ ರಾಯಚೂರು ಪಶ್ಚಿಮ ಠಾಣೆಯಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ ಎಸ್.ಸಿ.ನಂ.145/2021 (ಕ್ರೈಮ್ ನಂ.5/2018) ಕಲಂ.504, 506 ಐಪಿಸಿ ಅಡಿಯಲ್ಲಿ ದಾಖಲಾಗಿದ್ದು ರಾಯಚೂರು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಕೆ ಸುಧೀರರವರ ಹೆಂಡತಿ ಲಕ್ಷ್ಮೀರವರು ದೂರು ಸಲ್ಲಿಸಿದ್ದಾರೆ ಎಂದರೆ ಸರಿ.

ಸದರಿ ಪ್ರಕರಣದಲ್ಲಿ ನಾನು ಆರೋಪಿ ನಂ.5 ಇರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸುಧೀರರವರು ಸಾಲಗಾರರ ಕಾಟ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರು ದಾಖಲಾಗಿದೆ ಎಂದರೆ ಸರಿ. ಕೆ. ಸುಧೀರ ಜೀವಿತಾವಧಿಯಲ್ಲಿ ಅವರ ವಿರುದ್ಧ ನಾನು ಪ್ರಸ್ತುತ ದಾವೆಯ ಕೊಟೇಶ್ವರರಾವ್/ಪ್ರತಿವಾದಿರವರ ವಿರುದ್ಧ ದಾವೆ ಹೂಡಿಲ್ಲ ಎಂದರೆ ಸರಿ.

2. ನಿಪಿ-1 ದಾಖಲೆಯ ಆಧಾರದ ಮೇಲೆ ದಾವೆ ಹೂಡದೇ ಇರಲು ನನಗೆ ಯಾವುದೇ ಕಾರಣ ಇಲ್ಲ ಎಂದರೆ ಸರಿ. ನಿಪಿ-1 ದಾಖಲೆ ರೂ.2 ಲಕ್ಷ ಕೊಡುವ ಸಲುವಾಗಿ ಅದನ್ನು ರದ್ದು ಮಾಡಿದ್ದೇನೆ. ಕೆ ಸುಧೀರರವರ ಮರಣದ ನಂತರ ಅವರ ಹೆಂಡತಿ ಒಟ್ಟು 7 ಜನರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

3. ಬಡ್ಡಿ ಆಧಾರದ ಮೇಲೆ ಸಾಲ ಕೊಟ್ಟು ದಾಖಲೆಯನ್ನು ಬರೆಯಿಸಿಕೊಂಡರೆ ಅದರ ಕಾಲ ಪರಿಮಿತಿ 3 ವರ್ಷ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ದಾಖಲೆಯನ್ನು 06-07-2013 ರಂದು ಬರೆಯಲಾಯಿತು ಮತ್ತು ಅದನ್ನು 16-03-2016 ರಂದು ನಿಪಿ-2 ರ ಮೂಲಕ ರದ್ದುಗೊಳಿಸಲಾಯಿತು ಎಂದರೆ ಸರಿ. ಮತ್ತು ಅದೇದಿನ ನಿಪಿ-3 ದಾಖಲೆಯನ್ನು ಬರೆಯಲಾಯಿತು ಎಂದರೆ ಸರಿ. ಕೆ ಸುಧೀರ ಏನೂ ಕೆಲಸ ಮಾಡುತ್ತಿದ್ದರು ಎಂದು ನಾನು ಅವರ ಮರಣದ ನಂತರವು ಕೂಡಾ ತಿಳಿದುಕೊಂಡಿಲ್ಲ. ಕೆ ಸುಧೀರರವರ ಮರಣದ ವೇಳೆಯಲ್ಲಿ ಬರೆದ ಪತ್ರದ (death note) ಆಧಾರದ ಮೇಲೆ ಪ್ರಕರಣ ದಾಖಲಾಗಿದೆ ಎಂದು ನನಗೆ ಪೋಲೀಸರು ಹೇಳಿದ ನಂತರ ಗೊತ್ತಾಗಿರುತ್ತದೆ. ಸದರಿ ಕೇಸಿನಲ್ಲಿ ರೂ.15 ಲಕ್ಷ ಸಾಲವನ್ನು ನನ್ನ ಬಳಿಯಿಂದ ಪಡೆದಿದ್ದಾರೆ ಅಂತಾ ಕೆ ಸುಧೀರರವರು death note ನಲ್ಲಿ ಬರೆದಿದ್ದಾರೆ ಎಂದರೆ ಸರಿ.

4. ನಾನು ಕಳೆದ 30 ವರ್ಷಗಳಿಂದ ರಾಯಚೂರಿನಲ್ಲಿ ವಾಸವಾಗಿದ್ದೇನೆ. ನಿಜಲಿಂಗಪ್ಪ ಕಾಲೋನಿ ಮತ್ತು ಡ್ಯಾಡಿ ಕಲೋನಿ ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. ನನ್ನ ಮನೆ ಸುಧೀರರವರ ಮನೆಯಿಂದ 1 ಕಿಮಿ ಅಂತರದಲ್ಲಿದೆ. ನಾನು ಮತ್ತು ಮೃತ ಕೆ ಸುಧೀರರವರು ಆಂಧ್ರದಿಂದ ವಲಸೆ ಬಂದವರು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು